(*b*) if so, the reasons why the work of developing it as a tourist centre is not taken up so far, and when it will be taken up ?

SRI R. GUNDU RAO (Chief Minister).—

(*a*) No funds have been earmarked for development of Kodachadri Hill as a Tourist Centre.

(*b*) the development of this place as a tourist centre has not been taken up due to paucity of funds. It will be considered if adequate funds become available in the next plan.

Sri Malemahadeswara College at Kollegal

805. SRI K. L. SHIVALINGE GOWDA (Satanur).—Will the Minister for Education be pleased to state :—

(*a*) whether there is an Educational Institution called Sree Malemahadeswara swamy College in Kollegal, Mysore District ;

(*b*) when was it started ;

(*c*) whether it was started by private agency or Sree Malemahadeswara Swamy Muzarai Institution ;

(*d*) when was it taken over by the Government ?

SRI C. B. SHANKAR RAO (Minister for Education).—

(*a*) There is an Educational Institution called Sree Mahadeswara College of Arts and Science in Kollegal, Mysore District.

(*b*) In 1966.

(*c*) It was started by Sree Male Mahadeswara Swamy Muzarai Institution ;

(d) On 12-10-1970.

SRI K. H HANUMEGOWDA.—Sir, my question has not been taken up and that has to be taken now.

MR. SPEAKER.—The Hon.Labour Minister is on leave of absence. So, your question is withheld.

Representation by members.

re.—Representation of Stenographers, Reporters of Legislature Secretariat

SRI B. B. SAYANAK.—Sir, the Reporters, Stenographers and Typists of Legislature have given a notice to the Government that they are going on 'Mass Leave' on 24th of this month for pressing their demands.

MR. SPEAKER.—This matter pertains to the Legislature. The same has been examined. You please contact me and I will certainly discuss with you.

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಅಧ್ಯಕ್ಷರೇ ನಾನು ೨೦ ಪ್ರಶ್ನೆಗಳನ್ನು ಕಳುಹಿಸಿ ೨ ತಿಂಗಳಾಯಿತು. ಇದುವರೆಗೂ ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ ಕೆಲವರ ಪ್ರಶ್ನೆಗಳಿಗೆ ಉತ್ತರ ಎರಡು ದಿವಸಗಳಿಗೊಮ್ಮೆ ಬರುತ್ತಿದೆ. ಇದುವರೆಗೆ ನನ್ನ ಒಂದು ಪ್ರಶ್ನೆಗೂ ಉತ್ತರ ಬಂದಿಲ್ಲ.

ಅಧ್ಯಕ್ಷರು.—ಕಾಲ್ ಅಟೆನ್‌ಷನ್ ನೋಟೀಸ್ ಬಂದಿದೆ. ನಾನು ಅದನ್ನು ಚೆಕ್‌ಮಾಡುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.—ಬೀಜವನ್ನು ಸಪ್ಲೈ ಮಾಡುವ ಬಗ್ಗೆ ನಾನು ಒಂದು ಪಾರ್ಟ್‌ನೋಟೀಸ್ ಕ್ವೆಶ್ಚನ್ ಕೊಟ್ಟಿದ್ದೆ. ಈ ಗಾಗಲೇ ಬಿತ್ತಿದ ಬೀಜವೆಲ್ಲಾ ಮಳೆ ಇಲ್ಲದೆ ಒಣಗಿ ಹೋಗಿದೆ. ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ.

MR. SPEAKER.—Please contact me.

ಶ್ರೀ ಜೆ. ಎಚ್. ಪಟೇಲ್.—ಸ್ವಾಮಿ ಭೀಮಣ್ಣ ಖಂಡ್ರೆ ಎಂದು ಇರುವುದನ್ನು ಭೀಮಣ್ಣ ತರ್ಲೆ ಎಂದು ಮಾಡಿದರೆ ಒಳ್ಳೆಯದು.

re :—Admission to Students in Kolar Govt. College.

ಶ್ರೀ ಎಸ್. ಗೋವಿಂದಗೌಡ.—ಸ್ವಾಮಿ ಕೋಲಾರ ಸರ್ಕಾರಿ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಅಡ್ಮಿಷನ್ ಕೊಡುವ ಬಗ್ಗೆ ನಾನು ಒಂದು ನೋಟೀಸ್ ಕಳುಹಿಸಿದ್ದೆ. ಅದನ್ನು ತಾವು ಡಿಸ್‌ಅಲೋ ಮಾಡಿದ್ದೀರಿ. ಇದರ ಬಗ್ಗೆ ಮಾನ್ಯ ಮಂತ್ರಿಗಳಿಗೂ ಕೂಡ ಅರ್ಜಿಯನ್ನು ಕೊಟ್ಟಿದೆ. ಇವೊತ್ತು ಸುಮಾರು ೩೦೦ ಜನ ವಿದ್ಯಾರ್ಥಿಗಳು ನನ್ನ ಮನೆಯ ಮುಂದೆ ಧರಣಿ ಕುಳಿತುಕೊಂಡಿದ್ದಾರೆ ಆಗ್ಗದಿಂದ ಮಾನ್ಯ ವಿದ್ಯಾ ಮಂತ್ರಿಗಳು ಸಂಬಂಧಪಟ್ಟ ಕಾಲೇಜಿನ ಪ್ರಿನ್ಸಿಪಾಲರಿಗೆ ಸೂಚನೆ ಕೊಟ್ಟು ೩೦೦ ಜನ ವಿದ್ಯಾರ್ಥಿಗಳನ್ನು ಕಾಲೇಜಿಗೆ ಅಡ್ಮಿಟ್ ಮಾಡಿಕೊಳ್ಳುವುದಕ್ಕೆ ವಿಪ್ರಾಡು ಮಾಡಬೇಕು. ಒಂದು ತರಗತಿಗೆ ೮೦ ಹುಡುಗರಿಗಿಂತ ಹೆಚ್ಚು ವಿದ್ಯಾರ್ಥಿಗಳನ್ನು ಸೇರಿಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಮೆರಿಟ್ ಇರುವವರನ್ನು ಸೇರಿಸಿಕೊಳ್ಳಿ ಎಂದು ಸರ್ಕಾರದವರು ಡೈರೆಕ್ಷನ್ ಕೊಟ್ಟಿದ್ದಾರೆಂದು ನಾನು ಕೇಳಿದ್ದೇನೆ. ಆದರೆ ಹಳ್ಳಿಗಾಡುಗಳಲ್ಲಿ ೩೫ ಪರ್ಸೆಂಟ್ ಮೇಲೆ ಹುಡುಗರು ಮಾರ್ಕ್ ತೆಗೆದುಕೊಳ್ಳುವುದಿಲ್ಲ. ಪಿ.ಯು.ಸಿ. ಮೊದಲನೆಯ ವರ್ಷಕ್ಕೆ ೬೦ ಪರ್ಸೆಂಟ್ ಮಾರ್ಕ್ಸ್ ಬಂದಿರಬೇಕು ಎಂದು ಪ್ರಿನ್ಸಿಪಾಲರು ಹೇಳುತ್ತಾರೆ. ಹೀಗಿರುವಾಗ ಕೋಲಾರದ ಸರ್ಕಾರಿ ಕಾಲೇಜಿನಲ್ಲಿ ೩೦೦ ಜನ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವುದಕ್ಕೆ ಅವರಿಗೆ ಸೂಚನೆ ಕೊಡಬೇಕು. ೩೦೦ ಜನ ವಿದ್ಯಾರ್ಥಿಗಳು ಇವೊತ್ತು ನನ್ನ ಮನೆಯ ಮುಂದೆ ಧರಣಿ ಕುಳಿತುಕೊಂಡಿದ್ದಾರೆ.

ಶ್ರೀ ಯು. ಟಿ. ಫರೀದ್.—ಒಂದು ಸೆಕ್ಷನ್ನಿಗೆ ೮೦ ಮಂದಿ ವಿದ್ಯಾರ್ಥಿಗಳನ್ನು ಅಡ್ಮಿಟ್ ಮಾಡಿಕೊಳ್ಳಬೇಕೆಂದು ಸರ್ಕಾರದವರು ಸರ್ಕ್ಯುಲರ್ ಕಳುಹಿಸಿದ್ದರೂ ಕೂಡ ೬೦ ಮಂದಿಗೇ ನಿಲ್ಲಿಸಿದ್ದಾರೆ. ಹೆಚ್ಚು ಮಂದಿಯನ್ನು ತೆಗೆದುಕೊಳ್ಳುವುದಿಲ್ಲ ಎಂದು ಹೇಳುತ್ತಿದ್ದಾರೆ ನನ್ನ ಮಂಗಳೂರಿನಲ್ಲಿ ಕೂಡ ಈ ರೀತಿ ಆಗಿದೆ. ಇದರ ಬಗ್ಗೆ ಮಂತ್ರಿಗಳನ್ನು ನೋಡಲು ಎರಡು ಡೆಲಿಗೇಷನ್‌ಗಳು ಬಂದಿದ್ದವು. ಮಾನ್ಯ ಮಂತ್ರಿಗಳು ಅದನ್ನು ಸರಿಪಡಿಸುತ್ತೇನೆ ಎಂದು ಹೇಳಿದ್ದರು ಮಂತ್ರಿಗಳು ವಿದ್ಯಾರ್ಥಿಗಳಿಗೆ ಆಶ್ವಾಸನೆಯನ್ನು ಕೊಟ್ಟಿದ್ದರು. ಆ ಆಶ್ವಾಸನೆಯನ್ನು ಈ ಡೇರಿಸಿದ್ದಾರೆಯೋ ಇಲ್ಲವೋ ಗೊತ್ತಿಲ್ಲ. ನಮ್ಮಲ್ಲಿ ಏನಾಗಿದೆ ಎಂದರೆ ನಾವು ಜಾಸ್ತಿ ಅಡ್ಮಿಷನ್ ಕೇಳುತ್ತಾ ಇಲ್ಲ. ಇದ್ದದ್ದನ್ನು ಕಡಿಮೆ ಮಾಡಿದ್ದಾರೆ. ನಮ್ಮ ಜಿಲ್ಲೆಯ ಲ್ಲಿ ಕಾಲೇಜುಗಳಲ್ಲಿ ಈಗಾಗಲೇ ಅಡ್ಮಿಷನ್ ಕ್ಲೋಸ್ ಆಗಿದೆ ಎಂದು ಹೇಳುತ್ತಾರೆ. ಆದ್ದರಿಂದ ಈಗ ೮೦ ಜನ ವಿದ್ಯಾರ್ಥಿಗಳನ್ನು ಅಡ್ಮಿಟ್ ಮಾಡಿಕೊಳ್ಳಬಹುದು ಎಂದು ಒಂದು ಸರ್ಕ್ಯುಲರ್ ಅನ್ನು ಸರ್ಕಾರದವರು ಅಲ್ಲಿಗೆ ಕಳುಹಿಸಿದರೆ ಅವರು ವಿದ್ಯಾರ್ಥಿಗಳನ್ನು ಅಡ್ಮಿಟ್ ಮಾಡಿಕೊಳ್ಳುತ್ತಾರೆ. ಇಲ್ಲದಿದ್ದರೆ ಅಡ್ಮಿಟ್ ಮಾಡಿಕೊಳ್ಳುವುದಿಲ್ಲ. ಟೆಕ್ನಿಕಲ್ ಡಿಫಿಕಲ್ಟಿ ಇದೆ ಎಂದು ಹೇಳುತ್ತಾರೆ. ಆದ್ದರಿಂದ ಆ ಕಾಲೇಜಿನ ಪ್ರಿನ್ಸಿಪಾಲರಿಗೆ ಸರ್ಕ್ಯುಲರ್ ಹೋದರೆ ಅವರು ಅಡ್ಮಿಷನ್ ತೆಗೆದುಕೊಳ್ಳುತ್ತಾರೆ. ಇಲ್ಲದಿದ್ದರೆ ಆಗುವುದಿಲ್ಲ.